## ಪತ್ರಿಕಾ ಪ್ರಕಟಣೆ

ವಿಜಯಪುರ

ದಿನಾಂಕ: 01.08.2021

### 1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 234/2021 ಕಲಂ: 302, 201 ಐಪಿಸಿ.

ದಿನಾಂಕ: 28.07.2021 ರಂದು 22:00 ಗಂಟೆಯಿಂದ ದಿನಾಂಕ: 31.07.2021 ರ ಬೆಳಿಗ್ಗೆ 09:00 ಗಂಟೆ ನಡುವಿನ ಅವಧಿಯಲ್ಲಿ ಯಾರೋ ಆರೋಪಿತರು ಅನಾಮಧೇಯ ಹೆಣ್ಣುಮಗಳು ಅಂದಾಜು ವಯಸ್ಸು 20-25 ವರ್ಷ ಇವಳಿಗೆ ಯಾವುದೋ ಬಲವಾದ ಉದ್ದೇಶಕ್ಕಾಗಿ ಅವಳಿಗೆ ಎಲ್ಲಿಯೋ ತಲೆಗೆ, ಮುಖಕ್ಕೆ ಹೊಡೆದು ಹಾಗೂ ಕುತ್ತಿಗೆಗೆ ಗಾಯಪೆಟ್ಟುಪಡಿಸಿ ಕೊಲೆ ಮಾಡಿ, ಸಾಕ್ಷಿ ಪುರಾವೆ ನಾಶ ಮಾಡುವ ಉದ್ದೇಶದಿಂದ ಇಲ್ಲಿಗೆ ತಂದು ಒಗೆದು ಹೋಗಿರುತ್ತಾರೆ. ಈ ಬಗ್ಗೆ ಮುಂದಿನ ಕ್ರಮ ಕುರಿತು ನನ್ನದು ಫಿರ್ಯಾದಿ ಇರುತ್ತದೆ. ಈ ಬಗ್ಗೆ ಪ್ರದೀಪ ತಂದೆ ಧರೆಪ್ಪ ಉಪ್ಪಲದಿನ್ನಿ ವಯಾ 53 ವರ್ಷ ಜಾತಿ ಹಿಂದು ಕುರುಬರ ಉದ್ಯೋಗ ಒಕ್ಕಲುತನ ಸಾ: ಶಿವಣಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 31.07.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 2] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 104/2021 ಕಲಂ: 78(3) ಕೆ ಪಿ ಆ್ಯಕ್ಟ್.

ದಿನಾಂಕ: 31/07/2021 ರಂದು 09:25 ಗಂಟೆಗೆ. ನಿಡೋಣಿ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ' ಸುಮಾರಿಗೆ ಇದರಲ್ಲಿಯ ಆರೋಪಿತರಾದ ಮಹಮ್ಮದ ಜಾವೀದ ತಂ:ಉಮರಷಾ ಮಕಾಂದಾರ. ವಯಾ-27 ವರ್ಷ ಜಾತಿ-ಮುಸ್ಲಿಂ ಉದ್ಯೋಗ-ಕೂಲಿ ಕೆಲಸ ಸಾ:ನಿಡೋನಿ ತಾ:ಬಬಲೇಶ್ವರ ಈತನು ತನ್ನ ಫಾಯ್ದೆಗೋಸ್ಕರ ಒಂದು ರೂಪಾಯಿಗೆ 80/-ರೂ. ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಸಹಾಯದಿಂದ ಜನರಿಂದ ಹಣ ಪಡೆದುಕೊಂಡು ಬಾಂಬೆ ಕಲ್ಯಾಣ ಮಟಕಾ ಅನ್ನುವ ಓ.ಸಿ. ಜೂಜಾಟದಲ್ಲಿ ತೊಡಗಿದಾಗ ಸಿಕ್ಕಿದ್ದು.. ಈ ಬಗ್ಗೆ ಶ್ರೀ ಸೋಮನಗೌಡ ಬಿ ಗೌಡರ ಪಿ. ಎಸ್.ಐ ಬಬಲೇಶ್ವರ ಪಿ.ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 31.07,2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 3] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 105/2021 ಕಲಂ: 78(3) ಕೆ ಪಿ ಆ್ಯಕ್ಟ್.

ದಿನಾಂಕ: 31/07/2021 ರಂದು 12:45 ಗಂಟೆಗೆ. ಬಬಲೇಶ್ವರ ಪಟ್ಟಣದ ಬಸ್ಸ ನಿಲ್ದಾಣದ ಹತ್ತಿರ ಇದರಲ್ಲಿ ಆರೋಪಿತರಾದ 1)ಸಾಯಿಲ್ ತಂ:ಮೈಬೂಬ ಮಕಾಂದಾರ. ವಯಾ-21 ವರ್ಷ ಜಾತಿ-ಮುಸ್ಲಿಂ ಉದ್ಯೋಗ-ಕೂಲಿ ಕೆಲಸ ಸಾ:ಗುರುಪಾದೇಶ್ವರ ಮಠದ ಹತ್ತಿರ ಬಬಲೇಶ್ವರ ತಾ:ಬಬಲೇಶ್ವರ ತನ್ನ ಫಾಯ್ದೆಗೋಸ್ಕರ ಒಂದು ರೂಪಾಯಿಗೆ 80/-ರೂ. ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಸಹಾಯದಿಂದ ಜನರಿಂದ ಹಣ ಪಡೆದುಕೊಂಡು ಬಾಂಬೆ ಕಲ್ಯಾಣ ಮಟಕಾ ಅನ್ನುವ ಓ.ಸಿ. ಜೂಜಾಟದಲ್ಲಿ ತೊಡಗಿದಾಗ ಸಿಕ್ಕಿದ್ದು, ಈ ಬಗ್ಗೆ ಶ್ರೀ ಸೋಮನಗೌಡ ಬಿ ಗೌಡರ ಪಿ. ಎಸ್.ಐ ಬಬಲೇಶ್ವರ ಪಿ.ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 31.07,2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 4] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 235/2021 ಕಲಂ: 87 ಕೆ ಪಿ ಆ್ಯಕ್ಟ್

ದಿನಾಂಕ: 31.07.2021 ರಂದು 16-45 ಗಂಟೆಗೆ ಅರಕೇರಿ ಗ್ರಾಮದ ಸಂಗೀತಸಾಬ ದರ್ಗಾದ ಹತ್ತಿರ ಆರೋಪಿತನಾದ ಅಜಯ ತಂ ಪಾಂಡುರಂಗ ಮೋಹಿತೆ ವಯಾ 30 ವರ್ಷ ಸಾ: ಅರಕೇರಿ ಇನ್ನು 06 ಜನರು 'ಮೂದ ಮಾಡಿದ ಆರೋಪಿತರು ತಮ್ಮ ತಮ್ಮ ಪಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಅಂದರ ಬಾಹರ ಅನ್ನುವ ಮನ್ನಾ ಜೂಜಾಟ ಆಡುವ ಕಾಲಕ್ಕೆ ಸಿಕ್ಕ ಅಪರಾಧ ಜಪ್ತಾದ ಮಾಲು 1] ರೋಖ ಹಣ 5220/- ರೂ ಗಳು 2] 52 ಇಸ್ಪೇಟ ಎಲೆಗಳು ಕಿ: 00-00 ಈ ಬಗ್ಗೆ ಜಿ ಎಸ್ ಉಪ್ಪಾರ ಪಿ ಎಸ್ ಐ ಗ್ರಾಮೀಣ ಪಿ ಎಸ್ ವಿಜಯಪೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 31.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 5] ಝಳಕಿ ಪೊಲೀಸ ಠಾಣೆ ಗುನ್ನಾ. ನಂ: 68/2021 ಕಲಂ: ಮಹಿಳೆ ಕಾಣೆ

ದಿನಾಂಕ: 28.07.2021 ರಂದು ಸಾಯಂಕಾಲ 07.00 ಗಂಟೆಯ ಸುಮಾರಿಗೆ ಕಾಣೆಯಾದ ಮಹಿಳೆ ಶ್ರೀಮತಿ ರಿಯಾನ ಗಂ ಬಾಷಾಸಾಬ್ ಹನ್ನೂರ ವಯಾ-23 ವರ್ಷ ಜಾತಿ-ಮುಸ್ಲಿಂ ಉದ್ಯೋಗ:ಮನೆಕೆಲಸ ಸಾ: ಯರಗಲ್ಲ (ಬಿ.ಕೆ) ತಾ: ಸಿಂದಗಿ ಇವಳು ಚಡಚಣ ತಾಲೂಕಿನ ಹಲಸಂಗಿ ಗ್ರಾಮದ ತನ್ನ ಗಂಡನ ಚಿಕ್ಕಮ್ಮ ಬೇಬಿಜಾನ ಗಂ ಕುತುಬುದಿನ್ ನದಾಫ್ ಇವರ ಮನೆಯಿಂದ ಸಂಡಾಸಕ್ಕೆ ಹೋಗಿ ಬರುತ್ತೇನೆ ಅಂತಾ ಅವರ ಮನೆಯಲ್ಲಿ ಹೇಳಿ ಮನೆ ಬಿಟ್ಟು ಹೋದವಳು ಇಲ್ಲಿಯವರೆಗೆ ಮನೆಗೆ ವಾಪಸ್ಸ ಬರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ. ಈ ಬಗ್ಗೆ ಶ್ರೀಮತಿ ಖಾದರಬಿ ಗಂ ಬುಡ್ಡೇಸಾಬ್ ಯತ್ನಾಳ ವಯಾ-60 ವರ್ಷ ಉದ್ಯೋಗ- ಮನೆಕೆಲಸ ಜಾತಿ-ಮುಸ್ಲಿಂ ಸಾ: ಏವೂರ ತಾ: ಸುರಪುರ ಜಿ: ಯಾದಗೀರಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 31.07,2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.